# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ


**ಸುಭಾಷಿತ:**

ಎಲ್ಲಿ ಯಾರ ಹೆಸರಿನ ಅನ್ನವಿರುತ್ತದೋ
ಸಮಯ ಅವರನ್ನು ಅಲ್ಲಿಗೆ ಕರೆದೊಯ್ಯುತ್ತದೆ..
ಯಾರೂ ಕೂಡ ಇನ್ನೊಬ್ಬರು ಕೊಟ್ಟಿದ್ದನ್ನು ತಿನ್ನುವುದಿಲ್ಲ
ತನ್ನ ಅದೃಷ್ಟದಲ್ಲಿ ಇದ್ದುದನ್ನೇ ತಿನ್ನುತ್ತಾರೆ..
ಪರರಿಂದ ಯಾರು ಉನ್ನತ ಸ್ಥಾನ ಪಡೆಯುವುದಿಲ್ಲ
ಅದೃಷ್ಟದ ಬಾಗಿಲು ತೆರೆದಾಗ ತಾನಾಗಿಯೇ ಒಲಿಯುತ್ತದೆ..
ಇನ್ನೊಬ್ಬರ ಸಹಕಾರದಿಂದ ಸಿಂಹಾಸನ ಬದಲಾಗುವುದಿಲ್ಲ
ಭಗವಂತನ ಅನುಗ್ರಹ ಆದಾಗ ಅವಕಾಶ ಒದಗುತ್ತದೆ..
ಎಲ್ಲವೂ ಭೂಮಿಗೆ ಬರುವಾಗಲೇ ನಿಗದಿಯಾಗಿರುತ್ತದೆ
ಆದರೆ ಎಲ್ಲರು ಮಾನವರಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ..

**ಭಗವಾನ್ ಶ್ರೀಕೃಷ್ಣ**



REGD NO: 1327299/KARKAN/2018/26532 www.karavalitharangini.com KARAVALI THARANGINI KANNADA Weekly Mangaluru ದಿನಾಂಕ: 14-06-2024 to 20-06-2024 ಬೆಲೆ: 7-00 ಸಂಪುಟ–3 ಸಂಚಿಕೆ–51 ಪುಟಗಳು–6








ಮಳೆಗಾಲ ಬಂತೆಂದರೆ ಎಲ್ಲೆಂದರಲ್ಲಿ ಮೂಡುವ ವಿಶೇಷವಾದ ಅಣಬೆಗಳು ಮತ್ತು ಕಾಡು ಗೆಡ್ಡೆಗಳು ನಮ್ಮನ್ನು ಆಕರ್ಷಿಸುತ್ತವೆ. ಅದರಲ್ಲಿಯೂ ಮಕ್ಕಳಿಗೆ ಇವುಗಳನ್ನು ನೋಡುವುದೆಂದರೆ ಹಬ್ಬ. ಇದರಲ್ಲಿ ಹೆಚ್ಚಿನವು ವಿಷಕಾರಿಯಾಗಿರುತ್ತದೆ. ಆದರೆ ಅದರ ಅರಿವಿರದ ಕೆಲವರು ಇವುಗಳನ್ನು ಸೇವನೆ ಮಾಡಲು ಹೋಗಿ ಪ್ರಾಣ ಕಳೆದುಕೊಂಡ ನಿದರ್ಶನಗಳು ಕಾಣಸಿಗುತ್ತದೆ. ಹಾಗಿರುವಾಗ ಇಂತಹ ಗೊತ್ತಿರದ ಅಣಬೆ ಅಥವಾ ಕಾಡು ಗೆಡ್ಡೆ ಗೆಣಸುಗಳಿಂದ ದೂರ ಇರುವುದೇ ಉತ್ತಮ.

## ನಿಮ್ಮ ಮಕ್ಕಳನ್ನು ಬಂದಿಸಿದ್ದೇವೆ. ಹುಷಾರ್!



**ಮಂಗಳೂರು:** "ನಾವು ಪೊಲೀಸ್ ಅಧಿಕಾರಿಗಳಾಗಿದ್ದು, ನಿಮ್ಮ ಮಕ್ಕಳನ್ನು ಬಂಧಿಸಿದ್ದೇವೆ. ನಿಮ್ಮ ಮಕ್ಕಳನ್ನು ಬಿಡುಗಡೆ ಮಾಡಲು ಹಣ ಕೊಡಿ" ಎಂದು ನಿಮಗೂ ಕರೆ ಬರಬಹುದು. ಹುಷಾರಾಗಿರಿ. ಹಲವಾರು ಮೋಸದ ಜಾಲಗಳ ನಡುವೆ ಈಗ ಹೊಸ ಜಾಲವೊಂದು ಹುಟ್ಟಿಕೊಂಡಿದ್ದು, ಪೊಲೀಸರ ಹೆಸರಿನಲ್ಲಿ ವಿದ್ಯಾರ್ಥಿಗಳ ಹೆತ್ತವರಿಗೆ ಕರೆಗಳು ಬರುತ್ತಿರುವ ಬಗ್ಗೆ ಮಂಗಳೂರು ನಗರದ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಬಗ್ಗೆ ಮಾಹಿತಿ ನೀಡಿರುವ ಮಂಗಳೂರು ನಗರ ಪೊಲೀಸ್ **3ನೇ ಪುಟಕ್ಕೆ**

## ಕಾಂಗ್ರೆಸ್ ಸರ್ಕಾರದಿಂದ ಕೋಮು ಸೌಹಾರ್ದತೆ ಹಾಳು –ಆರ್ ಅಶೋಕ್




**ಮಂಗಳೂರು:** ಕಾಂಗ್ರೆಸ್ ಸರ್ಕಾರ ರಾಜ್ಯದ ಕೋಮು ಸೌಹಾರ್ದತೆಯನ್ನು ಹಾಳು ಮಾಡುತ್ತಿದೆ. ಕರ್ನಾಟಕದಲ್ಲಿ ಇರುವುದು ಮುಸಲ್ಮಾನ್ ಸರ್ಕಾರ ಎಂದು ಡಿಕೆಶಿ ಹಿಂದೆ ಹೇಳಿದ್ದು ಈಗ ನಿಜವಾಗುತ್ತಿದೆ ಎಂದು ವಿಧಾನ ಸಭೆಯ ವಿಪಕ್ಷ ನಾಯಕ ಆರ್ ಅಶೋಕ್ ಆರೋಪಿಸಿದರು. ಅವರು ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ನೀಡಿ ಬೋಳಿಯಾರ್ ಘಟನೆಗೆ ಸಂಬಂಧಿಸಿದಂತೆ ಚೂರಿ ಇರಿತದಲ್ಲಿ ಗಾಯಗೊಂಡವರನ್ನು ಭೇಟಿ ಮಾಡಿದ ಬಳಿಕ ಬಿಜೆಪಿ ಕಚೇರಿಯಲ್ಲಿ ಹಮ್ಮಿಕೊಂಡ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಬೋಳಿಯಾರು ಘಟನೆಯ ಪೂರ್ತಿ ವಿಡಿಯೋ ನಾನು ನೋಡಿದ್ದೇನೆ. ಅಲ್ಲಿ 'ಭಾರತ್ ಮಾತಾಕಿ ಜೈ' ಎಂದು ಘೋಷಣೆ ಕೂಗಿದ್ದು ಬಿಟ್ಟರೆ ಬೇರೆ ಏನು ಘೋಷಣೆ ಕೂಗಿಲ್ಲ. ಪಾಕಿಸ್ತಾನದ ಕುನ್ನಿಗಳು ಎಂದು ಘೋಷಣೆ ಕೂಗಿದ್ದಾರೆ ಎಂದು ಪೊಲೀಸ್ ಕಮಿಷನರ್ ಹೇಳಿದ್ದಾರೆ. ಅವರನ್ನು ಕರೆಸಿದ್ದೇನೆ. ಅವರ ಬಳಿ ದಾಖಲೆಗಳಿದ್ದಲ್ಲಿ **3ನೇ ಪುಟಕ್ಕೆ**

## ಯೋಗದಿಂದ ದೇಶಕ್ಕೆ ವಿಶೇಷ ಸ್ಥಾನ –ಡಾ.ಆಳ್ವ



**ಮಂಗಳೂರು:** ವಿವಿಧ ಕ್ಷೇತ್ರಗಳ ಮೂಲಕ ದೇಶಕ್ಕೆ ವಿಶೇಷ ಸ್ಥಾನಮಾನ ದೊರಕಿರುವ ಜತೆಯಲ್ಲಿಯೇ ಇತ್ತೀಚಿನ ವರ್ಷಗಳಲ್ಲಿ ಯೋಗ, ಧ್ಯಾನವೂ ಪ್ರಪಂಚದಲ್ಲಿ ದೇಶಕ್ಕೆ ವಿಶೇಷ ಸ್ಥಾನವನ್ನು ದೊರಕಿಸಿಕೊಟ್ಟಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಅಭಿಪ್ರಾಯ ಪಟ್ಟಿದ್ದಾರೆ. ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಜೂ. 12ರಿಂದ 24ರವರೆಗೆ ಪತ್ರಕರ್ತರು ಹಾಗೂ ಅವರು ಕುಟುಂಬ ಸದಸ್ಯರಿಗಾಗಿ ನಗರದ ಪ್ರೆಸ್‌ಕ್ಲಬ್‌ನಲ್ಲಿ ದೇವಿಕಾ **3ನೇ ಪುಟಕ್ಕೆ**







# ಸುದ್ದಿ ತುಣುಕು

ಡೆಂಗ್ಯೂ ಸೋಂಕಿನಿಂದ ಆಸ್ಪತ್ರೆ ಸಿಬ್ಬಂದಿ ಸಾವನ್ನಪ್ಪಿರುವ ಘಟನೆ ಶಿವಮೊಗ್ಗದಲ್ಲಿ ನಡೆದಿದೆ.

ಆನ್‌ಲೈನ್ ಅಪ್ಲಿಕೇಶನ್ ಮೂಲಕ ತರಿಸಿದ್ದ ಐಸಿಕ್ರೀಮ್‌ನಲ್ಲಿ ಮಾನವನ ಬೆರಳು ಪತ್ತೆಯಾಗಿರುವ ಘಟನೆ ಮುಂಬೈನಲ್ಲಿ ನಡೆದಿದೆ.

ಸರ್ಕಾರ ನಿಗದಿ ಮಾಡಿದ ದರಕ್ಕೆ ಮತ್ತು ಸೂಕ್ತ ಪ್ರಮಾಣದಲ್ಲಿ ಗೊಬ್ಬರ ಸಿಗುತ್ತಿಲ್ಲ ಎಂದು ರೈತರು ಆರೋಪಿಸಿದ್ದಾರೆ.

ಬಿಳಿಗಿರಿರಂಗನ ಬೆಟ್ಟದಲ್ಲಿ ಕಾಡಾನೆಯೊಂದು ಧಾವಿಸಿ, ಜನರನ್ನು ಭಯಭೀತರನ್ನಾಗಿಸಿದ ಘಟನೆ ನಡೆದಿದೆ.

ಬೋಳಿಯಾರುವಿನ ಚೂರಿ ಇರಿತ ಪ್ರಕರಣ ಸಂಬಂಧ ಮತ್ತೆ ಏಳು ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಫ್ರೀಡಂ ಪಾರ್ಕ್‌ನಲ್ಲಿ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಬಹುಮಹಡಿ ಪಾರ್ಕಿಂಗ್ ಲಾಟ್ ಜೂನ್ 20ರಂದು ಸಾರ್ವಜನಿಕ ಬಳಕೆಗೆ ಮುಕ್ತಗೊಳ್ಳಲಿದೆ.

ಲೋಕಸಮರದಲ್ಲಿ ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರುವಲ್ಲಿ ಹಿನ್ನಡೆ ಅನುಭವಿಸಿದ ರಾಜ್ಯದ ಹಲವು ಸಚಿವರುಗಳಿಗೆ ಇದೀಗ ಹೊಣೆಗಾರಿಕೆ ಎದುರಾಗಿದೆ. ಈಗಾಗಲೇ ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ಸೋಲಿನ ಪರಾಮರ್ಶೆ ನಡೆಸಲಾಗುತ್ತಿದೆ.

ವಕೀಲರ ರಕ್ಷಣೆಗಾಗಿ 'ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ಅಧಿನಿಯಮ-2023' ರಾಜ್ಯದಲ್ಲಿ ಜಾರಿಗೆ ಬಂದಿದೆ.

ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ಪಂಡಿತ್ ರಾಜೀವ್ ತಾರಾನಾಥ್ ಅವರ ಅಂತ್ಯಕ್ರಿಯೆ ನಡೆಸಲಾಯಿತು.

ನಾನು ಮತದಾರರನ್ನು ಸ್ಯಾಡಿಸ್ಟ್ ಎಂದು ಕರೆದಿಲ್ಲ. ಸ್ಯಾಡಿಸ್ಟ್ ನೇಚರ್ ಆರಂಭವಾಗಿದೆ ಎಂದಷ್ಟೇ ಹೇಳಿದ್ದೇನೆ. ಮಾಧ್ಯಮಗಳು ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥಮಾಡಿಕೊಂಡಿವೆ ಎಂದು ಕೆಪಿಸಿಸಿ ಮಾಧ್ಯಮ ವಕ್ತಾರ ಎಂ. ಲಕ್ಷ್ಮಣ್ ತಿಳಿಸಿದ್ದಾರೆ.

ಕನ್ನಡ ಚಿತ್ರರಂಗದ ಹಿರಿಯ ನಟಿ, ದಿವಂಗತ ಲೀಲಾವತಿ ಅವರ ಪುತ್ರ ನಟ ವಿನೋದ್ ರಾಜ್ ಆರೋಗ್ಯದಲ್ಲಿ ಏರುಪೇರಾಗಿದ್ದು, ನೆಲಮಂಗಲದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅವರಿಗೆ ಕರುಳಿನ ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು, ಇದೀಗ ಚೇತರಿಸಿಕೊಳ್ಳುತ್ತಿದ್ದಾರೆ.

ಜಮ್ಮು ಕಾಶ್ಮೀರದ ದಾಳಿಗಳ ಭಯೋತ್ಪಾದಕರ ರೇಖಾಚಿತ್ರ ಬಿಡುಗಡೆ ಮಾಡಲಾಗಿದ್ದು, ಮಾಹಿತಿ ಕೊಟ್ಟರೆ 20 ಲಕ್ಷ ರೂಪಾಯಿ ಬಹುಮಾನ ಕೊಡುವುದಾಗಿ ಪೊಲೀಸರು ಘೋಷಿಸಿದ್ದಾರೆ.

ಅರುಣಾಚಲ ಪ್ರದೇಶ ಸಿಎಂ ಆಗಿ ಸತತ 3ನೇ ಬಾರಿಗೆ ಪೇಮಾ ಖಂಡು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಪಶ್ಚಿಮ ಬಂಗಾಳದ ನಾಲ್ಕು ವರ್ಷದ ಮಗುವಿನಲ್ಲಿ ಮಾನವನಲ್ಲಿ ಕಾಣಿಸಿಕೊಳ್ಳುವ ಹಕ್ಕಿಜ್ವರ ಹೆಚ್9ಎನ್2 ದೃಢಪಟ್ಟಿರುವುದಾಗಿ ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.

ಪುರಿ ಜಗನ್ನಾಥ ದೇವಾಲಯದ ಎಲ್ಲ ನಾಲ್ಕು ದ್ವಾರಗಳನ್ನು ಭಕ್ತರ ದರ್ಶನಕ್ಕಾಗಿ ಮತ್ತೆ ತೆರೆಯಲಾಗಿದೆ.

## ನಾಟಿ ಕೋಳಿ ಸಾರು



**ಬೇಕಾಗುವ ಸಾಮಾಗ್ರಿಗಳು :**

ನಾಟಿಕೋಳಿ ಮಾಂಸ-1 ಕೆಜಿ
ಈರುಳ್ಳಿ-2
ಬೆಳ್ಳುಳ್ಳಿ-10 ಎಸಲು
ತೆಂಗಿನ ಕಾಯಿ ತುರಿ-1 ಕಪ್
ದನಿಯಾ-2 ಚಮಚ
ಒಣ ಮೆಣಸಿನಕಾಯಿ-12
ಅರಿಶಿಣ - 1/2ಚಮಚ
ಜೀರಿಗೆ- 1 ಚಮಚ
ಚಕ್ಕೆ, ಲವಂಗ, ಕರಿ ಮೆಣಸು ಸ್ವಲ್ಪ
ಉಪ್ಪು- ರುಚಿಗೆ ತಕ್ಕಷ್ಟು
ತೆಂಗಿನ ಎಣ್ಣೆ- 5 ಚಮಚ
ಶುಂಠಿ- ಸ್ವಲ್ಪ
ಕೊತ್ತಂಬರಿ ಸೊಪ್ಪು- ಸ್ವಲ್ಪ

**ಮಾಡುವ ವಿಧಾನ :**

ಮೊದಲಿಗೆ ಬಾಣಲೆಯಲ್ಲಿ ಸ್ವಲ್ಪ ಎಣ್ಣೆ ಕಾಯಿಸಿ, ಅದಕ್ಕೆ ಸ್ವಲ್ಪ ಹೆಚ್ಚಿದ ಈರುಳ್ಳಿ ಹಾಕಿ ಕೆಂಪು ಬಣ್ಣ ಬರುವವರೆಗೂ ಹುರಿದು, ನಂತರ ಶುಚಿಗೊಳಿಸಿದ ಕೋಳಿ ಮಾಂಸವನ್ನು ಹಾಕಿ ಅದಕ್ಕೆ ಅರಿಶಿನ ಪುಡಿ ಮತ್ತು ಉಪ್ಪು ಹಾಕಿ ಬೇಯಿಸಬೇಕು. ಹಾಗೇ ಇನ್ನೊಂದು ಬಾಣಲೆಯಲ್ಲಿ ಸಲ್ಪ ಎಣ್ಣೆ ಹಾಕಿ, ಒಂದು ಈರುಳ್ಳಿ ಹುರಿದು, ಅದನ್ನು ತೆಗೆದಿರಿಸಿ ನಂತರ ಅದೇ ಬಾಣಲೆಗೆ ದನಿಯಾ, ಒಣ ಮೆಣಸಿನಕಾಯಿ, ಚಕ್ಕೆ, ಲವಂಗ, ಜೀರಿಗೆ, ಮೆಣಸು, ಶುಂಠಿ ಹಾಕಿ ಹುರಿಯಬೇಕು. ತಣ್ಣಾಗದ ನಂತರ ಎಲ್ಲವನ್ನು ಸೇರಿಸಿ ನುಣ್ಣನೆ ರುಬ್ಬಿಕೊಳ್ಳಬೇಕು. ನಂತರ ರುಬ್ಬಿದ ಮಿಶ್ರಣವನ್ನು ಹುರಿದ ಕೋಳಿ ಮಾಂಸಕ್ಕೆ ಹಾಕಿ ಚೆನ್ನಾಗಿ ಬೇಯಿಸಬೇಕು. ಅದೇ ಸಮಯಕ್ಕೆ ತೆಂಗಿನ ಕಾಯಿ ರುಬ್ಬಿ, ಕಾಯಿ ಹಾಲು ಸಿದ್ದ ಪಡಿಸಿಕೊಂಡು ಆ ಹಾಲನ್ನು ಬೇಯುತ್ತಿರುವ ಸಾರಿಗೆ ಸೇರಿಸಿ ಚೆನ್ನಾಗಿ ಬೇಯಿಸಬೇಕು. ಕೋಳಿ ಬೆಂದ ನಂತರ ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪು ಮೇಲೆ ಹಾಕಿದರೆ ರುಚಿಕರವಾದ ನಾಟಿ ಕೋಳಿ ಸಾರು ಸವಿಯಲು ಸಿದ್ಧ.

# ಲೆಬನಾನ್ ಕಡೆಯಿಂದ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ



ಜೆರುಸಲೇಂ: ಲೆಬನಾನ್‌ನಿಂದ ಉತ್ತರ ಇಸ್ರೇಲ್ ಮೇಲೆ ಸುಮಾರು 160 ರಾಕೆಟ್‌ಗಳನ್ನು ಹಾರಿಸಲಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ. ಇಸ್ರೇಲಿ ವೈಮಾನಿಕ ದಾಳಿಯಲ್ಲಿ ಹಿರಿಯ ಕಮಾಂಡರ್ ಸೇರಿದಂತೆ ನಾಲ್ವರು ಹಿಜ್ಬುಲ್ಲಾ ಅಧಿಕಾರಿಗಳು ಸಾವನ್ನಪ್ಪಿದ ಘಟನೆಯ ನಂತರ ಲೆಬನಾನ್ ಕಡೆಯಿಂದ ಈ ರಾಕೆಟ್ ದಾಳಿ ನಡೆದಿದೆ. ರಾಕೆಟ್‌ಗಳು ಅಪ್ಪಳಿಸಿದ್ದರಿಂದ ಇಸ್ರೇಲ್‌ನ ಹಲವಾರು ಭಾಗಗಳಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ರಾಷ್ಟ್ರೀಯ ಅಗ್ನಿಶಾಮಕ ಮತ್ತು ರಕ್ಷಣಾ ಪ್ರಾಧಿಕಾರ ತಿಳಿಸಿದೆ.

# ಕಸ, ಕರಪತ್ರ ರವಾನೆ ನಿಲ್ಲಿಸದಿದ್ದರೆ ಪ್ರತಿದಾಳಿ : ವಾರ್ನಿಂಗ್

ಸಿಯೋಲ್ : ಉತ್ತರ ಕೊರಿಯಾ ವಿರೋಧಿ ಬರಹಗಳ ಪ್ರಚಾರ ಕರಪತ್ರಗಳನ್ನು ದೇಶದೊಳಗೆ ಕಳುಹಿಸುವುದು ಮತ್ತು ಗಡಿಯಲ್ಲಿ ಲೌಡ್ ಸ್ಪೀಕರ್ ಮೂಲಕ ಪ್ರಚಾರ ಮಾಡುವುದನ್ನು ನಿಲ್ಲಿಸದಿದ್ದರೆ ದಕ್ಷಿಣ ಕೊರಿಯಾವು ದೊಡ್ಡ ಮಟ್ಟದ ಪ್ರತಿದಾಳಿಯನ್ನು ಎದುರಿಸಬೇಕಾಗುತ್ತದೆ ಎಂದು ಉತ್ತರ ಕೊರಿಯಾದ ನಾಯಕ ಕಿಮ್ ಜಾಂಗ್-ಉನ್ ಅವರ ಸಹೋದರಿ ಎಚ್ಚರಿಸಿದ್ದಾರೆ. ಉತ್ತರ ಕೊರಿಯಾವು ಗಡಿಯುದ್ದಕ್ಕೂ 1,400 ಬಲೂನ್



ಗಳಲ್ಲಿ ಸುಮಾರು 7.5 ಟನ್ ತ್ಯಾಜ್ಯ ವಸ್ತುಗಳನ್ನು ತುಂಬಿಸಿ ಕಳುಹಿಸಿದೆ ಎಂದು ಕಿಮ್ ಹೇಳಿದ್ದಾರೆ.

# ಪಾಕಿಸ್ಥಾನದಲ್ಲಿ ಪೋಲಿಯೊ ಪ್ರಕರಣ ಪತ್ತೆ



ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಐದನೇ ಪೋಲಿಯೊ ಪ್ರಕರಣ ಪತ್ತೆಯಾಗಿದೆ. ನೈಋತ್ಯ ಬಲೂಚಿಸ್ತಾನ್ ಪ್ರಾಂತ್ಯದ ಕ್ವೆಟ್ಟಾ ನಗರದಲ್ಲಿ ಪೋಲಿಯೊ ಪೀಡಿತ ಮಗು ಪಾರ್ಶ್ವವಾಯುಗೆ ತುತ್ತಾಗಿ ಸಾವನ್ನಪ್ಪಿದೆ ಎಂದು ಪಾಕಿಸ್ತಾನದ ಆರೋಗ್ಯ ಸಚಿವಾಲಯ ತಿಳಿಸಿದೆ. 2 ವರ್ಷದ ಮಗುವಿನ ಎರಡು ಕಾಲುಗಳಲ್ಲಿ ಪಾರ್ಶ್ವವಾಯುಗೆ ತುತ್ತಾಗಿದೆ. ಬಳಿಕ ಮಗುವಿನ ತೋಳುಗಳು ಕೂಡ ದುರ್ಬಲಗೊಂಡು ಕ್ರಮೇಣ ಮಗು ಅನಾರೋಗ್ಯಕ್ಕೆ ಒಳಗಾಗಿದೆ.

# ಮೋದಿ-ತೈವಾನ್ ಅಧ್ಯಕ್ಷರ ಶುಭಾಶಯ ವಿನಿಮಯ : ಚೀನಾ ಆಕ್ಷೇಪ

ವಾಷಿಂಗ್ಟನ್: ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಗೆಲವು ಸಾಧಿಸಿದ ಹಿನ್ನೆಲೆ ಪ್ರಧಾನಿ ನರೇಂದ್ರ ಮೋದಿ ಹಾಗೂ ತೈವಾನ್ ಅಧ್ಯಕ್ಷ ಲೈ ಚಿಂಗ್-ಟೆ ಶುಭಾಶಯ ವಿನಿಮಯ ಮಾಡಿಕೊಂಡಿದ್ದರು. ಇದನ್ನು ಚೀನಾ ತೀವ್ರವಾಗಿ ಪ್ರತಿಭಟಿಸಿತ್ತು. ಈ ವಿಚಾರವಾಗಿ ಪ್ರತಿಕ್ರಿಯಿಸಿದ ಅಮೆರಿಕ ಸ್ಟೇಟ್ ಡಿಪಾರ್ಟ್ಮೆಂಟ್, "ಇಬ್ಬರು ವಿದೇಶಿ ನಾಯಕರ ನಡುವಿನ ಇಂತಹ ಅಭಿನಂದನಾ ಸಂದೇಶಗಳು ರಾಜ



ತಾಂತ್ರಿಕ ವ್ಯವಹಾರದ ಒಂದು ಭಾಗವಾಗಿದೆ" ಎಂದು ಹೇಳಿದೆ.

# ಹಿಂದೂ, ಜೈನ ಯಾತ್ರಾರ್ಥಿಗಳಿಗಾಗಿ ಧಾರ್ಮಿಕ ಕಾರಿಡಾರ್



ಇಸ್ಲಾಮಾಬಾದ್ : ಕರ್ತಾರ್‌ಪುರ್ ಕಾರಿಡಾರ್ ಮಾದರಿಯಲ್ಲಿ ಭಾರತದಿಂದ ಪಾಕಿಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ಮತ್ತೊಂದು ಕಾರಿಡಾರ್ ನಿರ್ಮಾಣದ ಬಗ್ಗೆ ಸಿಂಧ್ ಪ್ರವಾಸೋದ್ಯಮ ಸಚಿವ ಜುಲ್ಫಿಕರ್ ಅಲಿ ಶಾ ಪ್ರಸ್ತಾಪ ಮಾಡಿದ್ದಾರೆ. ಪಾಕಿಸ್ಥಾನದ ಉಮರ್‌ಕೋಟ್ ಮತ್ತು ನಾಗರ್ ಪಾರ್ಕರ್ ಗಳಲ್ಲಿ ಇರುವ ಹಿಂದೂ ದೇವಾಲಯಗಳಿಗೆ ಭಾರತದ ಗುಜರಾತ್ ಮತ್ತು ರಾಜಸ್ಥಾನದ ಭಕ್ತರು ಭೇಟಿ ನೀಡಲು ಅನುಕೂಲವಾಗುವಂತೆ ಹೊಸ ಕಾರಿಡಾರ್ ನಿರ್ಮಾಣದ ಬಗ್ಗೆ ಸಿಂಧ್ ಪ್ರಾಂತ್ಯದ ಸಚಿವರು ಮಾತನಾಡಿದ್ದಾರೆ.

# ಜೈಲಿನಲ್ಲಿದ್ದರೂ 246 ದಿನದಲ್ಲಿ 403 ಜನರೊಂದಿಗೆ 105 ಸಭೆ

ಪಾಕಿಸ್ತಾನ: ಪಾಕಿಸ್ತಾನ್ ತೆಹ್ರೀಕ್-ಇ-ಇನ್ಸಾಫ್ (ಪಿಟಿಐ) ಸಂಸ್ಥಾಪಕ ಹಾಗೂ ಮಾಜಿ ಪ್ರಧಾನಿ ಇಮ್ರಾನ್ ಖಾನ್ ರಾವಲ್ಪಿಂಡಿಯ ಅಡಿಯಲ ಜೈಲಿನಲ್ಲಿ 2023ರ ಸೆಪ್ಟೆಂಬರ್ 28ರಿಂದ 2024ರ ಮೇ30ರವರೆಗೆ ಒಟ್ಟು 246 ದಿನಗಳಲ್ಲಿ ಕನಿಷ್ಠ 403 ಜನರೊಂದಿಗೆ 105 ಸಭೆಗಳನ್ನು ನಡೆಸಿದ್ದಾರೆ ಎಂದು ಅಲ್ಲಿನ ಅಧಿಕೃತ ಮಾಧ್ಯಮ ಸಂಸ್ಥೆ ವರದಿ ಮಾಡಿದೆ. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಇಸ್ಲಾಮಾಬಾದ್ ಹೈ



ಕೋರ್ಟ್ ನೀಡಿದ ಆದೇಶದ ಬಳಿಕ ಮಾಜಿ ಪ್ರಧಾನಿಯುನ್ನು ಅಟಾಕ್ ಜೈಲಿನಿಂದ ಅಡಿಯಲ ಜೈಲಿಗೆ ಸ್ಥಳಾಂತರಿಸ ಲಾಯಿತು.

# ಕತಾರ್ ಮೋಸದಾಟಕ್ಕೆ ಭಾರತ ಫುಟ್ಬಾಲ್ ತಂಡ ಬಲಿ



ಕತಾರ್: ಕ್ರಿಕೆಟ್‌ನಂತೆ ಫುಟ್ಬಾಲ್‌ನಲ್ಲಿ ಮಹತ್ತರ ಬದಲಾವಣೆ ತರಬೇಕಿದೆ. ಈ ಕೂಗು ಸಾಮಾಜಿಕ ಜಾಲತಾಣಗಳಲ್ಲಿ ಜೋರಾಗಿ ಕೇಳಿ ಬರುತ್ತಿದೆ. ಇದಕ್ಕೆ ಕಾರಣ, ಕತಾರ್‌ನ ಮೋಸದಾಟಕ್ಕೆ ಭಾರತ ಫುಟ್ಬಾಲ್ ತಂಡ ಬಲಿಯಾಗಿರುವುದು. ಈ ಸೋಲಿನಿಂದ ಭಾರತ ತಂಡ 2026ರ ಫಿಫಾ ವಿಶ್ವಕಪ್ ಅರ್ಹತಾ ಟೂರ್ನಿಯಿಂದ ಹೊರಬಿದ್ದರೆ, 2027ರ ಏಷ್ಯನ್ ಕಪ್‌ಗೆ ನೇರ ಅರ್ಹತೆ ಪಡೆಯಲು ವಿಫಲವಾಗಿ ಡಬಲ್ ಶಾಕ್ ಅನುಭವಿಸಬೇಕಾಯಿತು.

# ಚೊಚ್ಚಲ ಫ್ರೆಂಚ್ ಓಪನ್ ಪ್ರಶಸ್ತಿಗೆ ಮುತ್ತಿಕ್ಕಿದ ಕಾರ್ಲೋಸ್ ಅಲ್ಕರಾಜ್

ಫ್ರಾನ್ಸ್: ಪ್ಯಾರಿಸ್‌ನ ಕೋರ್ಟ್ ಫಿಲಿಪ್ - ಚಾಟ್ರಿಯರ್‌ನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಟೆನ್ನಿಸ್ ಆಟಗಾರ ಕಾರ್ಲೋಸ್ ಅಲ್ಕರಾಜ್ ಅತ್ಯುತ್ತಮ ಪ್ರದರ್ಶನ ನೀಡಿ ಅಲೆಕ್ಸಾಂಡರ್ ಜ್ವೆರೆವ್ ವಿರುದ್ಧ ಅಸಾಧಾರಣ ಗೆಲುವು ದಾಖಲಿಸಿದರು. ಈ ಮೂಲಕ ಕಾರ್ಲೋಸ್ ಅಲ್ಕರಾಜ್ ಅವರು, ಚೊಚ್ಚಲ ಫ್ರೆಂಚ್ ಓಪನ್ 2024 ಪುರುಷರ ಸಿಂಗಲ್ಸ್



ಕಿರೀಟ ಮುಡಿಗೇರಿಸಿಕೊಂಡಿದ್ದಾರೆ.

# ಅಮೆರಿಕ ಮಣಿಸಿ ಸೂಪರ್-8ಕ್ಕೆ ಭಾರತ



ನ್ಯೂಯಾರ್ಕ್: ಅರ್ಷದೀಪ್ ಸಿಂಗ್ ಮಿಂಚಿನ ಬೌಲಿಂಗ್ ಹಾಗೂ ಸೂರ್ಯಕುಮಾರ್ ಯಾದವ್ ಮತ್ತು ಶಿವಂ ದುಬೆ ಅವರ ಸಮಯೋಚಿತ ಜೊತೆಯಾಟದ (72 ರನ್) ನೆರವಿನಿಂದ ಟಿ20 ವಿಶ್ವಕಪ್‌ನಲ್ಲಿ ಯುಎಸ್ ವಿರುದ್ಧ ಭಾರತ 7 ವಿಕೆಟ್‌ಗಳ ಜಯ ಸಾಧಿಸಿದೆ. ಇಲ್ಲಿನ ಬುಧವಾರ ನಸ್ಸೌ ಕೌಂಟಿ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಬುಧವಾರ ಅತಿಥೇಯರನ್ನು ಮಣಿಸಿದ ಟೀಂ ಇಂಡಿಯಾ ಸೂಪರ್-8ಕ್ಕೆ ಲಗ್ಗೆ ಇಟ್ಟಿದೆ.

# ವಿಐಎಸ್‌ಎಲ್ ಕಾರ್ಮಿಕರಲ್ಲಿ ಹೊಸ ಭರವಸೆ



ಶಿವಮೊಗ್ಗ: ಹೆಚ್.ಡಿ ಕುಮಾರಸ್ವಾಮಿ ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕ ಸಚಿವರಾದ ಮೇಲೆ ಭದ್ರಾವತಿಯ ವಿಐಎಸ್‌ಎಲ್ ಖಾಯಂ ಹಾಗೂ ಗುತ್ತಿಗೆ ನೌಕರರಲ್ಲಿ ಆಶಾಕಿರಣ ಮೂಡಿದಂತೆ ಆಗಿದೆ. ನಷ್ಟದ ಕಾರಣ ನೀಡಿ ಕೇಂದ್ರದ ನೀತಿ ಆಯೋಗವು ವಿಶ್ವೇಶ್ವರಯ್ಯ ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆಯನ್ನು ಮುಚ್ಚುವ ಆದೇಶ ಮಾಡಿತ್ತು. ನಂತರ ಖಾಸಗೀಕರಣಕ್ಕೆ ಅವಕಾಶ ನೀಡಿತ್ತು. ಆದರೆ ಸಂಸದ ಬಿ.ವೈ ರಾಘವೇಂದ್ರ ಸತತ ಶ್ರಮದಿಂದ ಒಂದು ವರ್ಷದ ಅವಧಿಗೆ ಕಾರ್ಖಾನೆಯಲ್ಲಿ ಉತ್ಪಾದನೆ ಮಾಡಲು ಬಂಡವಾಳ ಹೂಡಿಕೆ ಮಾಡಿಸಿದ್ದಾರೆ. ಆದರೆ, ಕಾರ್ಖಾನೆಯ ಮೇಲೆ ತೂಗುಗತ್ತಿ ಇದ್ದೇ ಇದೆ.

# ಬೆಂಗಳೂರು ಮಹಾನಗರ ವಿಭಜನೆ ಬೇಡ: ಎನ್.ಆರ್.ರಮೇಶ್

ಬೆಂಗಳೂರು: ಯಾವುದೇ ಕಾರಣಕ್ಕೂ ನಾಡಪ್ರಭು ಕೆಂಪೇಗೌಡರು ನಿರ್ಮಿಸಿರುವ ಬೆಂಗಳೂರು ಮಹಾನಗರವನ್ನು ವಿಭಜನೆ ಮಾಡಬಾರದೆಂದು ಕೋರಿ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಮಾಜಿ ಅಧ್ಯಕ್ಷ ಎನ್.ಆರ್.ರಮೇಶ್



ಪತ್ರ ಬರೆದಿದ್ದಾರೆ. ಮಹದೇವಪುರ ವಲಯ ಮತ್ತು ಪೂರ್ವ ವಲಯಗಳನ್ನು ಒಳಗೊಂಡಿರುವ ಪಾಲಿಕೆ ಆರ್ಥಿಕವಾಗಿ ಶ್ರೀಮಂತ ಪಾಲಿಕೆಯಾಗುತ್ತದೆ ಹಾಗೂ ದಾಸರಹಳ್ಳಿ ಮತ್ತು ಪಶ್ಚಿಮ ವಲಯಗಳನ್ನು ಒಳಗೊಂಡ ಪಾಲಿಕೆ ಆರ್ಥಿಕವಾಗಿ ಹಿಂದುಳಿದ ಪಾಲಿಕೆಯಾಗುತ್ತದೆ ಎಂದು ಅವರು ಹೇಳಿದ್ದಾರೆ.


# ಬೆಳಗಾವಿ ಕೋರ್ಟ್ ಆವರಣದಲ್ಲಿ ಪಾಕ್ ಪರ ಘೋಷಣೆ

ಬೆಳಗಾವಿ: ಕೇಂದ್ರ ಸಚಿವ ನಿತಿನ್ ಗಡ್ಕರಿ ಹಾಗೂ ಎಡಿಜಿಪಿ ಅಲೋಕ್ ಕುಮಾರ್ ಅವರಿಗೆ ಜೀವ ಬೆದರಿಕೆ ಹಾಕಿದ ಪ್ರಕರಣದ ಆರೋಪಿಯೋರ್ವ ನ್ಯಾಯಾಲಯದ ಆವರಣದಲ್ಲೇ ಪಾಕ್‌ಪರ ಘೋಷಣೆ ಕೂಗಿದ ಆರೋಪ ಬೆಳಗಾವಿಯಲ್ಲಿ ಕೇಳಿ ಬಂದಿದೆ. ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿನ ಕೈದಿ ಜಾಕಿರ್ (ಜಯೇಶ್ ಪೂಜಾರಿ) ಈ ಘೋಷಣೆ ಕೂಗಿದ್ದಾನೆ ಎಂದು ಹೇಳಲಾಗಿದೆ. ಘೋಷಣೆ ಕೂಗುತ್ತಿದ್ದಂತೆ ವಕೀಲರು, ಸಾರ್ವಜನಿಕರು ಹಿಡಿದು ಥಳಿಸಿದ್ದಾರೆ. ವಿಚಾರಣೆಗಾಗಿ ಪೊಲೀಸರು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು. ಘೋಷಣೆ ಕೂಗಿದ ಬಳಿಕ ಆತನನ್ನು ಎಪಿಎಂಸಿ ಠಾಣೆಗೆ ಕರೆದೊಯ್ದಿದ್ದಾರೆ.



# ಸರ್ಕಾರಿ ಜಾಗಗಳ ರಕ್ಷಣೆಗಾಗಿ ಲ್ಯಾಂಡ್ ಬೀಟ್

ದೊಡ್ಡಬಳ್ಳಾಪುರ: "ದೇಶದಲ್ಲೇ ಪ್ರಥಮ ಬಾರಿಗೆ ಸರ್ಕಾರಿ ಜಾಗಗಳ ಸಂರಕ್ಷಣೆಗಾಗಿ ಲ್ಯಾಂಡ್ ಬೀಟ್ ವ್ಯವಸ್ಥೆ ಮತ್ತು ಪಹಣಿದಾರರ ಜಮೀನುಗಳ ರಕ್ಷಣೆಗಾಗಿ ಆರ್‌ಟಿಸಿಯಲ್ಲಿ ಜಮೀನು ಮಾಲೀಕರ ಭಾವಚಿತ್ರ ಜೊತೆಗೆ ಆಧಾರ್ ಜೋಡಣೆ ವ್ಯವಸ್ಥೆಯನ್ನು ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಲ್ಯಾಂಡ್ ಬೀಟ್ ಮತ್ತು



ಆಧಾರ್ ಜೋಡಣೆ ಮಾರ್ಚ್ ತಿಂಗಳಿಂದ ಪ್ರಾರಂಭವಾಗಿದೆ ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು. ಪರಿಶೀಲನೆ ನಡೆಸಲು ಸಚಿವರು ದೊಡ್ಡಬಳ್ಳಾಪುರ ತಾಲೂಕಿನ ಮಧುರೆ ಹೋಬಳಿಯ ಕೋಡಿಪಾಳ್ಯ, ಚೆನ್ನಾದೇವಿ ಅಗ್ರಹಾರ ಗ್ರಾಮದ ಸರ್ಕಾರಿ ಜಾಗ, ಕೆರೆ ಒತ್ತುವರಿ ಜಾಗಗಳಿಗೆ ಭೇಟಿ ನೀಡಿದರು.

# ರಾಜ್ಯದಲ್ಲಿ ಮುಂಗಾರು ಅಬ್ಬರ ಮತ್ತಷ್ಟು ಜೋರು



ಬೆಂಗಳೂರು: ಮುಂಗಾರು ಮಳೆ ಚುರುಕುಗೊಂಡಿದ್ದು, ಕೆಲ ದಿನಗಳ ವಿರಾಮದ ನಂತರ ಮತ್ತೆ ರಾಜ್ಯದೆಲ್ಲೆಡೆ ವರ್ಷಧಾರೆ ವ್ಯಾಪಿಸಿಕೊಂಡಿದೆ. ಕರಾವಳಿಯ ಮೂರೂ ಜಿಲ್ಲೆಗಳ ಹಲವೆಡೆ ಧಾರಾಕಾರ ಮಳೆಯಾಗಿದ್ದು, ಮಲೆನಾಡು, ಉತ್ತರ ಹಾಗೂ ದಕ್ಷಿಣ ಒಳನಾಡಿನ ಕೆಲವೆಡೆ ಮಾತ್ರ ಮಳೆಯಾಗಿದೆ. ಘಟ್ಟ ಪ್ರದೇಶದಲ್ಲಿ ಹೆಚ್ಚಿನ ಮಳೆ ಸುರಿಯು ತ್ತಿರುವ ಪರಿಣಾಮ ನದಿ ಹಾಗೂ ಜಲಾಶಯ ಗಳಿಗೆ ನೀರಿನ ಹರಿವು ಹೆಚ್ಚುತ್ತಿದೆ. ಕರಾವಳಿ ಸೇರಿ 10 ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಹವಾಮಾನ ಇಲಾಖೆ ಯು ಯೆಲ್ಲೋ ಅಲರ್ಟ್ ಘೋಷಿಸಿದೆ. ಕರಾವಳಿಯಲ್ಲಿ ಅತೀ ಹೆಚ್ಚು ಮಳೆಯಾಗಲಿದೆ.

# ಉತ್ತರ ಕನ್ನಡದ ಹೆದ್ದಾರಿಯಲ್ಲಿ ಗುಡ್ಡ ಕುಸಿತದ ಭೀತಿ


ಕಾರವಾರ: ಜಿಲ್ಲೆಯಲ್ಲಿ ಮುಂಗಾರು ಅಬ್ಬರ ಜೋರಾಗಿದೆ. ಮೊದಲ ಮಳೆಗೆ ಹಲವೆಡೆ ನೀರು ತುಂಬಿಕೊಂಡು ಅವಾಂತರಗಳಾಗಿವೆ. ಅರೆಬರೆಗೊಂಡಿರುವ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಕಲ್ಲು ಬಂಡೆಗಳು ಹೆದ್ದಾರಿಗೆ ಉರುಳುತ್ತಿವೆ. ಕೆಲವೆಡೆ ಗುಡ್ಡವೇ ಕುಸಿಯುವ ಭೀತಿ ಇದೆ. ಹೀಗಾಗಿ, ಪ್ರಯಾಣಿಕರು ಪ್ರಾಣಭಯ



ದಲ್ಲೇ ಸಂಚಾರ ಮಾಡುವಂತಾಗಿದೆ. ಕಳೆದ 10 ವರ್ಷಗಳಿಂದ ರಾಷ್ಟ್ರೀಯ ಹೆದ್ದಾರಿ 66ರ ಅಗಲೀಕರಣ ಕಾಮಗಾರಿ ಕುಂಟುತ್ತಾ ಸಾಗುತ್ತಿದೆ. ಗುಡ್ಡದಿಂದ ಕಲ್ಲುಗಳು ಉರಳಿ ಹೆದ್ದಾರಿಗೆ ಬಿದ್ದಿವೆ. ಹೆದ್ದಾರಿ ಅಗಲೀಕರಣದ ವೇಳೆ ಕರಾವಳಿಯುದ್ದಕ್ಕೂ ತೆರವು ಮಾಡಿದ ಕೆಲ ಗುಡ್ಡಗಳು ಈಗಲೂ ಬಾಯ್ತೆರೆದಿವೆ.


# ವಯನಾಡೋ, ರಾಯ್ ಬರೇಲಿಯೋ ?

ಕೇರಳ: 2024ರ ಲೋಕಸಭೆ ಚುನಾವಣೆಯಲ್ಲಿ ಕೇರಳದ ವಯನಾಡ್ ಮತ್ತು ಉತ್ತರ ಪ್ರದೇಶದ ರಾಯ್ ಬರೇಲಿ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗೆಲುವು ಸಾಧಿಸಿದ್ದಾರೆ. ಈಗ ಯಾವ ಕ್ಷೇತ್ರದ ಸಂಸದರಾಗಿ ಅವರು ಮುಂದುವರೆಯುತ್ತಾರೆ, ಯಾವ ಕ್ಷೇತ್ರವನ್ನು ಬಿಟ್ಟುಕೊಡುತ್ತಾರೆ ಎಂಬುದು ಕುತೂಹಲಕ್ಕೆ ಕಾರಣವಾಗಿದೆ. ಎರಡೂ ರಾಜ್ಯಗಳಿಗೆ ರಾಹುಲ್ ಭೇಟಿ ನೀಡಿ, ತಮ್ಮನ್ನು ಗೆಲ್ಲಿಸಿದ ಮತದಾರರಿಗೆ ಧನ್ಯವಾದ ಸಲ್ಲಿಸಿದ್ದಾರೆ. ಇದರ ನಡುವೆ ವಯನಾಡ್ ಕ್ಷೇತ್ರವನ್ನೇ ಅವರು ಬಿಟ್ಟುಕೊಡಲಿದ್ದಾರೆ ಎಂಬ ಸುಳಿವು ಇದ್ದರೆ, ತಾವು ಇನ್ನೂ ಉಭಯ ಸಂಕಟದಲ್ಲಿ ಇರುವುದಾಗಿ ಖುದ್ದಾಗಿ ಸಂಸದ ಹೇಳಿದ್ದಾರೆ.



# ಪಾಕಿಸ್ಥಾನ ಭಾರತದೊಂದಿಗೆ ಶಾಂತಿ ಬಯಸುತ್ತಿದೆ : ಫಾರೂಕ್ ಅಬ್ದುಲ್ಲಾ

ಜಮ್ಮು ಮತ್ತು ಕಾಶ್ಮೀರ : ಪಾಕಿಸ್ತಾನವು ಭಾರತದೊಂದಿಗೆ ಶಾಂತಿ ಮಾತುಕತೆ ಬಯಸುತ್ತಿದೆ. ಕಾಶ್ಮೀರದಲ್ಲಿ ನಡೆಯುತ್ತಿರುವ ವಿಧ್ವಂಸಕ ಕೃತ್ಯಗಳನ್ನು ನಿಲ್ಲಿಸಲು ಭಾರತ ಮಾತುಕತೆಗೆ ಅವಕಾಶ ನೀಡಬೇಕು ಎಂದು ಜಮ್ಮು ಮತ್ತು ಕಾಶ್ಮೀರದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಮುಖ್ಯಸ್ಥ, ಮಾಜಿ ಸಿಎಂ ಫಾರೂಕ್ ಅಬ್ದುಲ್ಲಾ



ಹೇಳಿದ್ದಾರೆ. ಮಾತುಕತೆ ನಡೆಸದ ಹೊರತು ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ಭಯೋತ್ಪಾದಕರು ಪಾಕಿಸ್ತಾನದ ನುಸುಳುತ್ತಿದ್ದಾರೆ. ಮುಂದೆ ಅಮರನಾಥ ಯಾತ್ರೆ ಆರಂಭವಾಗಲಿದೆ. ಪವಿತ್ರ ಯಾತ್ರೆಗೆ ಉಗ್ರ ಬೆದರಿಕೆ ಇರಬಾರದು ಎಂದರೆ, ಪಾಕಿಸ್ತಾನದ ಜೊತೆಗೆ ಮಾತುಕತೆ ನಡೆಸಬೇಕು ಎಂದರೆ.

# ಅಯೋಧ್ಯೆಯಲ್ಲಿ ಎನ್‌ಎಸ್‌ಜಿ ಕೇಂದ್ರ ಆರಂಭಕ್ಕೆ ಸಿದ್ಧತೆ



ಉತ್ತರ ಪ್ರದೇಶ: ರಾಮ ನಗರಿ ಅಯೋಧ್ಯೆಯಲ್ಲಿ ರಾಷ್ಟ್ರೀಯ ಭದ್ರತಾ ಸಿಬ್ಬಂದಿ ಕೇಂದ್ರ ಸ್ಥಾಪನೆಯ ಪ್ರಸ್ತಾವನೆಯನ್ನು ಕೇಂದ್ರ ಗೃಹ ಸಚಿವಾಲಯವು ಸಿದ್ಧಪಡಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಈಗಾಗಲೇ ಅಯೋಧ್ಯೆಯಲ್ಲಿ ಉತ್ತರ ಪ್ರದೇಶದ ವಿಶೇಷ ಭದ್ರತಾ ಪಡೆ (ಯುಪಿಎಸ್‌ಎಸ್‌ಎಫ್), ಭಯೋತ್ಪಾದನೆ ನಿಗ್ರಹ ದಳ (ಎಟಿಎಸ್) ಮತ್ತು ಪ್ರಾದೇಶಿಕ ಸಶಸ್ತ್ರ ಪಡೆಯ ಬೆಟಾಲಿಯನ್‌ಗಳನ್ನು ನಿಯೋಜಿಸಲಾಗಿದೆ. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣದ ನಂತರ ದೇಶ ಮತ್ತು ವಿದೇಶಗಳಿಂದ ಭಕ್ತರ ಸಂಖ್ಯೆಯಲ್ಲಿ ಹೆಚ್ಚಾಗುತ್ತಿದೆ. ಆದ್ದರಿಂದ ಅಯೋಧ್ಯೆ ಭದ್ರತೆಯ ಬಗ್ಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹೆಚ್ಚಿನ ಸೂಕ್ಷ್ಮತೆಯಿಂದ ಪರಿಶೀಲಿಸುತ್ತಿವೆ.

# ಸೇನಾ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ

ನವದೆಹಲಿ: ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ ಅವರು ಮುಂದಿನ ಸೇನಾ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ. ಪ್ರಸ್ತುತ ಉಪ ಸೇನಾ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿರುವ ದ್ವಿವೇದಿ ಅವರು ಇದೇ ಜೂನ್ 30 ರಂದು ನಿವೃತ್ತಿ ಹೊಂದಲಿರುವ ಜನರಲ್ ಮನೋಜ್ ಪಾಂಡೆ (ಸೇನಾ ಮುಖ್ಯಸ್ಥ) ಅವರ ಸ್ಥಾನವ



ನ್ನು ಅಲಂಕರಿಸಲಿದ್ದಾರೆ. ಸೇನೆಯ ಉಪ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಳ್ಳುವ ಮೊದಲು ದ್ವಿವೇದಿ ಅವರು 2022 - 24ರ ವರೆಗೆ ಉಧಮ್‌ಪುರ ಮೂಲದ ಉತ್ತರ ಕಮಾಂಡ್‌ನ ಜನರಲ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ (ಜಿಒಸಿ-ಇನ್-ಸಿ) ಆಗಿ ಸೇವೆ ಸಲ್ಲಿಸಿದ್ದರು.

# ಮೋದಿ ಹೊಸ ಸಂಪುಟದ ಸಚಿವರ ಮೇಲಿದೆ ಕ್ರಿಮಿನಲ್ ಪ್ರಕರಣ!

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರದ ಸಂಪುಟ ಸಚಿವರು ಅಧಿಕಾರ ಸ್ವೀಕಾರ ಮಾಡಿದ್ದು, ಇಲಾಖಾ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಮೂರನೇ ಅವಧಿಯ ಸಚಿವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳಿವೆ. ಕೊಲೆ ಯತ್ನ, ಮಹಿಳೆಯರ ಮೇಲೆ ದೌರ್ಜನ್ಯ, ದ್ವೇಷ ಭಾಷಣದಂತಹ ಗಂಭೀರ ಪ್ರಕರಣಗಳೂ ದಾಖಲಾಗಿವೆ. ಸರ್ಕಾರೇತರ ಚುನಾವಣಾ ಹಕ್ಕುಗಳ ಸಂಸ್ಥೆಯಾದ ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್ ಅಧ್ಯಯನ ನಡೆಸಿದ್ದು, ಕ್ರಿಮಿನಲ್ ಆರೋಪ ಎದುರಿಸುತ್ತಿರುವ 28 ಕೇಂದ್ರ ಸಚಿವರ ಪಟ್ಟಿ ಮಾಡಿದೆ.



# ಕರಾವಳಿ ತರಂಗಿಣಿ ಸಿನಿ ತರಂಗಿಣಿ

## "ತುಡರ್" ತುಳು ಸಿನಿಮಾ ಜೂ.14ಕ್ಕೆ ತೆರೆಗೆ..



ಸುಮುಖ ಪ್ರೊಡಕ್ಷನ್ಸ್ ಲಾಂಛನದಲ್ಲಿ ತಯಾರಾದ "ತುಡರ್" ತುಳು ಸಿನಿಮಾ ಜೂನ್ 14ರಂದು ಕರಾವಳಿ ಜಿಲ್ಲೆಯಾದ್ಯಂತ ತೆರೆ ಕಾಣಲಿದೆ. ಮಂಗಳೂರಿನ ರೂಪವಾಣಿ, ಭಾರತ್ ಸಿನಿಮಾಸ್, ಪಿವಿಆರ್, ಸಿನಿಪೊಲಿಸ್, ಸುರತ್ಕಲ್‌ನ ಸಿನಿಗ್ಯಾಲಕ್ಸಿ, ಪಡುಬಿದ್ರೆಯ ಭಾರತ್ ಸಿನಿಮಾಸ್, ಊಗಿ ಉಡುಪಿಯ ಕಲ್ಪನ, ಭಾರತ್ ಸಿನಿಮಾಸ್, ಮಣಿಪಾಲದಲ್ಲಿ ಐನಾಕ್ಸ್, ಭಾರತ್ ಸಿನಿಮಾಸ್, ಕಾರ್ಕಳದಲ್ಲಿ ಪ್ಲಾನೆಟ್, ರಾಧಿಕಾ, ಪುತ್ತೂರಿನ ಭಾರತ್ ಸಿನಿಮಾಸ್ ಬೆಳ್ತಂಗಡಿಯ ಭಾರತ್ ಚಿತ್ರಮಂದಿರದಲ್ಲಿ ಸಿನಿಮಾ ತೆರೆಕಾಣಲಿದೆ. ಚಿತ್ರದ ಬಗ್ಗೆ ಮಾತಾಡಿದ ಮೋಹನ್ ರಾಜ್ ಅವರು, "2019ರಲ್ಲಿ ಚಿತ್ರಕ್ಕೆ ಕಥೆ ಬರೆದಿದ್ದು ತುಳು ಚಿತ್ರರಂಗದಲ್ಲಿ ಹೊಸತನ ತರಲು ನಿರ್ಮಾಪಕರು ನೆರವಾಗಿದ್ದಾರೆ. ಚಿತ್ರ ನೋಡುವ ಪ್ರತಿಯೊಬ್ಬರಿಗೂ ಇಷ್ಟವಾಗಿಲಿದೆ ಎಂದು ತಿಳಿಸಿದ್ದಾರೆ.

## "ಸೂರ್ಯ ಕಿರಣ" ಪ್ರಥಮ ಹಂತ ಮುಕ್ತಾಯ..



ನಾಗರಾಜ ಜಾಲಿಹಾಳ ಅವರ ಆಶೀರ್ವಾದಗಳೊಂದಿಗೆ ಶಂಕರ ರಾವ್ ಕುಲಕರ್ಣಿ (ಉದ್ಬಾಳ) ಅರ್ಪಿಸುವ ಧಾರವಾಡದ ಉತ್ಸಾಹಿ ಯುವಕ ಸಿದ್ಧಾರ್ಥ್ ಜಾಲಿಹಾಳ ಅವರು ಎಸ್ ಎನ್ ಜಾಲ್ಸ್ ಲಾಂಛನದಲ್ಲಿ ನಿರ್ಮಾಣ ಮಾಡುತ್ತಿರುವ 'ಸೂರ್ಯ ಕಿರಣ' ಕನ್ನಡ ಚಲನಚಿತ್ರ ಚಿತ್ರೀಕರಣದ ಪ್ರಥಮ ಹಂತ ಮುಕ್ತಾಯಗೊಂಡಿದೆ. ಧಾರವಾಡ ಸುತ್ತಮುತ್ತ ಸತತ ಹತ್ತು ದಿನಗಳ ಕಾಲ ಪ್ರಮುಖ ದೃಶ್ಯಗಳನ್ನು ಚಿತ್ರೀಕರಿಸಲಾಗಿದ್ದು ಶೀಘ್ರದಲ್ಲೇ ಎರಡನೆ ಹಂತದ ಚಿತ್ರೀಕರಣವನ್ನು ಧಾರವಾಡ, ದಾಂಡೇಲಿ, ಗೋವಾ ಸುತ್ತಮುತ್ತ ನಡೆಸಲಾಗುವದೆಂದು ನಿರ್ದೇಶಕ ಅರವಿಂದ ತಿಳಿಸಿದ್ದಾರೆ. ತಾರಾಗಣದಲ್ಲಿ ಡಾ ಕಲ್ಮೇಶ್ ಹಾವೇರಿಪೇಟ್, ಪ್ರಜ್ವಲ್ ಕಲ್ಮೇಶ್, ಮೇಘನಾ, ಮುತ್ತುರಾಜ ಹಂಡಿ, ಕಿಶನರಾವ್ ಕುಲಕರ್ಣಿ, ಎನ್ ಎಸ್ ಪಾಟೀಲ ಮುಂತಾದವರಿದ್ದಾರೆ.

## ಕೋಸ್ಟಲ್ ಫಿಲಂ ಅವಾರ್ಡ್ಸ್ 2024

ಸತತ ಮೂರನೇ ಬಾರಿಗೆ ಸ್ಯಾಂಡಿಸ್ ಕಂಪನಿ ಅರ್ಪಿಸುವ ಸಿನಿ ಗ್ಯಾಲಕ್ಸಿ ಕೋಸ್ಟಲ್ ಫಿಲ್ಡ್ ಅವಾರ್ಡ್ಸ್ 2024 ಜೂನ್ 16 ರಂದು ಭಾನುವಾರ ಸಂಜೆ 3 ಗಂಟೆಗೆ ಸರಿಯಾಗಿ ಮುಲ್ಕಿಯ ಸುಂದರರಾಮ ಶೆಟ್ಟಿ ಕನ್ವೆನ್ಷನಲ್ ಸೆಂಟರ್‌ನಲ್ಲಿ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಕನ್ನಡ ಚಿತ್ರರಂಗದ ವಿಜಯ ರಾಘವೇಂದ್ರ, ಹಿನ್ನೆಲೆ ಗಾಯಕಿ ಅನುರಾಧ ಭಟ್, ನಟರಾದ ಸಿದ್ದು ಮೂಲಿಮನೆ, ತುಳು ಚಿತ್ರರಂಗದ ರೂಪೇಶ್ ಶೆಟ್ಟಿ, ಪೃಥ್ವಿ ಅಂಬರ್ ಹಾಗೂ ಮೋಹಕ ತಾರೆ ಸೋನಲ್ ಮೊಂತೆರೋ ಭಾಗವಹಿಸಲಿದ್ದಾರೆ. ತುಳು ಚಿತ್ರರಂಗದ ನಟ ನಟಿಯರಿಂದ ಅದ್ಭುತ ನೃತ್ಯ ಹಾಗೂ ರಸಮಂಜರಿ ನಡೆಯಲಿದೆ. ಈ ಬಾರಿ 2023 ರಲ್ಲಿ ತೆರೆಕಂಡಿರುವ ಒಟ್ಟು 11 ಸಿನಿಮಾಗಳು ಸ್ಪರ್ಧೆಗೆ ಬಂದಿವೆ. ಅಲ್ಲದೆ ಬೇರೆ ಬೇರೆ ಸ್ಪರ್ಧೆ ನಡೆಯಲಿದ್ದು, ಉಚಿತ ಪ್ರವೇಶ ಎಂದು ಸಾರಥಿ ಶ್ರೀ ಸಂದೇಶ ರಾಜ್ ಬಂಗೇರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಈ ಸಂದರ್ಭದಲ್ಲಿ ಯಶ್ ರಾಜ್, ಸಾತ್ವಿಕ್ ಪೂಜಾರಿ, ಪ್ರೇಮ್ ಶೆಟ್ಟಿ, ವಿಜಯಕುಮಾರ್ ಕೊಡಿಯಾಲ್‌ಬೈಲ್, ಕಾರ್ತಿಕ್ ಶೆಟ್ಟಿ ಉಪಸ್ಥಿತರಿದ್ದರು.



## ಸರ್ಜಾ ಪುತ್ರಿ ಅದ್ಧೂರಿ ವಿವಾಹ..




ಹೆಸರಾಂತ ನಟ ಅರ್ಜುನ್ ಸರ್ಜಾ ಹಾಗೂ ನಿವೇದಿತಾ ಸರ್ಜಾ ಅವರ ಪುತ್ರಿ ಚಿ।ಸೌ। ಐಶ್ವರ್ಯ ಅರ್ಜುನ್ ಅವರ ವಿವಾಹ ಮಹೋತ್ಸವ ಚಿ।ಉಮಾಪತಿ ರಾಮಯ್ಯ ಅವರೊಂದಿಗೆ(ಶಾಂತಿ ರಾಮಯ್ಯ ಹಾಗೂ ತಂಬಿ ರಾಮಯ್ಯ ಅವರ ಪುತ್ರ) ಚೆನ್ನೈನ ಅಂಜನಸುತ ಶ್ರೀ ಯೋಗಾಂಜನೇಯ ದೇವಸ್ಥಾನದಲ್ಲಿ ಜೂನ್ ಹತ್ತರಂದು ಅದ್ದೂರಿಯಾಗಿ ನೆರವೇರಿತು. ಜೂನ್ ಏಳರಂದು ಅರಿಶಿನ ಶಾಸ್ತ್ರದೊಂದಿಗೆ ಮದುವೆ ಕಾರ್ಯಕ್ರಮಗಳು ಆರಂಭವಾದವು. ಆನಂತರ ಸಂಗೀತ್ ಹಾಗೂ ವರಪೂಜಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು. ಸಂಗೀತ್ ಸಮಾರಂಭಕ್ಕೆ ಹೆಸರಾಂತ ಕಲಾ ನಿರ್ದೇಶಕ ಮೋಹನ್ ಅವರು ಅದ್ದೂರಿ ಸೆಟ್ ಹಾಕಿದ್ದರು. ಎರಡು ಕಟುಂಬದ ಬಂಧುಗಳು ಹಾಗೂ ಹತ್ತಿರದ ಮಿತ್ರರು ಈ ವಿವಾಹ ಮಹೋತ್ಸವದಲ್ಲಿ ಪಾಲ್ಗೊಂಡಿದ್ದರು. ಜೂನ್ 14ರಂದು ಚೆನ್ನೈನ ಖಾಸಗಿ ಹೋಟೆಲ್‌ನಲ್ಲಿ ಆರತಕ್ಷತೆ ನಡೆಯಲಿದೆ.

## 'ಶರಣರ ಶಕ್ತಿ' ಆಡಿಯೋ ಬಿಡುಗಡೆ

ಶ್ರೀಶಾ ಫಿಲ್ಮ್ ಹುಬ್ಬಳ್ಳಿ ಅರ್ಪಿಸುವ 'ಶರಣರ ಶಕ್ತಿ' ತಡಿವ್ಯಾರ ನೋಡು...ಭಕ್ತಿ ಪ್ರಧಾನ ಕನ್ನಡ ಚಲನಚಿತ್ರದ 'ಬಣ್ಣ ಕಳಚೈತಿ' ಆಡಿಯೋ ಬಿಡುಗಡೆ ಸಮಾರಂಭ ಹುಬ್ಬಳ್ಳಿಯ ಡಾ ಕೆ ಎಸ್ ಶರ್ಮ ಕಲ್ಯಾಣ ಮಂಟಪದಲ್ಲಿ ಜರುಗಿತು. ಜಗದ್ಗುರು ಫಕೀರ ಸಿದ್ದರಾಮ ಮಹಾಸ್ವಾಮಿಗಳು ಶಿರಹಟ್ಟಿ, ಡಾ. ಶಿವಲಿಂಗ ಶಿವಾಚಾರ್ಯರು ಗಂಜಿಗಟ್ಟಿ. ತ್ರಿವಿಧ ದಾಸೋಹಿ ಬಸವಣ್ಣಜ್ಜನವರು ಕುಂದಗೋಳ. ಶರಣ ಬಸವ ಸ್ವಾಮೀಜಿಗಳು ಗಜೇಂದ್ರಗಡ. ಬಸಲಿಂಗಯ್ಯ ಶಾಸ್ತ್ರಿಗಳು ಸೂರಣಿಗಿ ಮಠ. ಭಕ್ತವೃಂದ ದಿವ್ಯಜ್ಞಾನ ಗುರುಕುಲ ಹುಬ್ಬಳ್ಳಿ ವಹಿಸಿದ್ದರು. ಚಿತ್ರಕ್ಕೆ ಮುಂಜಾನೆ ಮಂಜು ಛಾಯಾಗ್ರಹಣ, ಕೆ. ಕಲ್ಯಾಣ ಸಾಹಿತ್ಯ, ವಿನು ಮನಸು ಸಂಗೀತ, ಆರ್. ಮಹಾಂತೇಶ ಸಂಕಲನ, ಡಾ. ಪ್ರಭು ಗಂಜಿಹಾಳ, ಡಾ. ವೀರೇಶ ಹಂಡಿಗಿ ಪತ್ರಿಕಾ ಸಂಪರ್ಕ, ದಿಲೀಪ್ ಶರ್ಮ ಚಿತ್ರಕಥೆ, ಸಂಭಾಷಣೆ ಜೊತೆಗೆ ಎರಡು ಹಾಡುಗಳನ್ನು ಬರೆದಿದ್ದು ಜೊತೆಗೆ ನಿರ್ದೇಶನ ಮಾಡುತ್ತಿದ್ದಾರೆ. ಶರಣರ ಶಕ್ತಿ ಭಕ್ತಿ ಪ್ರಧಾನ ಚಿತ್ರವನ್ನು ಶ್ರೀಮತಿ ಅರಾಧನಾ ಕುಲಕರ್ಣಿ ನಿರ್ಮಿಸಿದ್ದಾರೆ.






Edited,Published, Printed by Lalita Kumari (Lalithasri Preetham Rai) Shop N0: 6, Lingamma Towers. Opp. Pandeshwar police station, Pandeshwar Mangaluru 575001. Dakshina Kannada.
All Rights Reserved RNI Ref: 1327299/KARKAN26532. Printed @ Digantha Mudrana Limited, Yeyyadi, Mangaluru 575008 email: karavalitharangini@gmail.com PH: +91 9880109212